ಸೂ. 52 | **69. ಅಲ್ ಹಾಕ್ಕಃ** | ರು. 2

آياتها ٥٢ سُورَةُ الْحَاقَّةِ مَكِّيَّةٌ ركوعاتها ٢

(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ۝

1. ಖಚಿತವಾದ ಸಂಭವ[1]-

اَلْحَآقَّةُ ۝١

2. ಏನದು ಖಚಿತವಾದ ಸಂಭವ?

مَا الْحَآقَّةُ ۝٢

3. ಆ ಖಚಿತವಾದ ಸಂಭವ ಏನೆಂಬುದು ನಿಮಗೇನು ಗೊತ್ತು?

وَمَآ اَدْرٰىكَ مَا الْحَآقَّةُ ۝٣

4. ಸಮೂದ್ ಮತ್ತು ಆದ್ (ಜನಾಂಗದವರು) ಹಠಾತ್ತನೆ ಬಂದೆರಗುವ ಆ ವಿಪತ್ತನ್ನು[2] ನಿರಾಕರಿಸಿಬಿಟ್ಟರು.

كَذَّبَتْ ثَمُوْدُ وَعَادٌۢ بِالْقَارِعَةِ ۝٤

5. ಸಮೂದರಂತು ಒಂದು ಭೀಕರ ಅಪಘಾತದ ಮೂಲಕ ನಾಶಗೊಳಿಸಲ್ಪಟ್ಟರು.

فَاَمَّا ثَمُوْدُ فَاُهْلِكُوْا بِالطَّاغِيَةِ ۝٥

6. ಮತ್ತು ಆದ್ ಒಂದು ತೀವ್ರ ಚಂಡಮಾರುತದಿಂದ ನಾಶಗೊಳಿಸಲ್ಪಟ್ಟರು-

وَاَمَّا عَادٌ فَاُهْلِكُوْا بِرِيْحٍ صَرْصَرٍ عَاتِيَةٍ ۝٦

7. ಅಲ್ಲಾಹನು ಅದನ್ನು ನಿರಂತರ ಏಳು ರಾತ್ರೆ ಮತ್ತು ಎಂಟು ಹಗಲುಗಳ ಕಾಲ ಅವರ ಮೇಲೆ ಹೇರಿಟ್ಟನು. (ನೀವು ಅಲ್ಲಿರುತ್ತಿದ್ದರೆ) ಅವರು ಅಲ್ಲಿ ಖರ್ಜೂರದ ಟೊಳ್ಳಾದ ಕಾಂಡಗಳಂತೆ ಬಿದ್ದಿರುವುದನ್ನು ಕಾಣುತ್ತಿದ್ದಿರಿ.

سَخَّرَهَا عَلَيْهِمْ سَبْعَ لَيَالٍ وَّثَمٰنِيَةَ اَيَّامٍ ۙ حُسُوْمًا ۙ فَتَرَى الْقَوْمَ فِيْهَا صَرْعٰى ۙ كَاَنَّهُمْ اَعْجَازُ نَخْلٍ خَاوِيَةٍ ۝٧

8. ಈಗ ಅವರ ಪೈಕಿ ಯಾರಾದರೂ ಉಳಿದಿರುವುದು ನಿಮಗೆ ಕಾಣಿಸುತ್ತಿದೆಯೇ?

فَهَلْ تَرٰى لَهُمْ مِّنْۢ بَاقِيَةٍ ۝٨

---

1. ಮೂಲದಲ್ಲಿ 'ಹಾಕ್ಕಃ' ಎಂಬ ಪದ ಪ್ರಯೋಗವಾಗಿದೆ. ಅದರರ್ಥ ನಿಶ್ಚಯವಾಗಿಯೂ ಸಂಭವಿಸಲೇಬೇಕಾದ ಘಟನೆ. ಅರ್ಥಾತ್, ಅದನ್ನು ನೀವೆಷ್ಟು ನಿರಾಕರಿಸಿದರೂ ಅದಂತೂ ಖಂಡಿತ ಸಂಭವಿಸಲಿಕ್ಕಿದೆ. ನಿಮ್ಮ ನಿರಾಕರಣೆಯಿಂದ ಅದರ ಆಗಮನ ನಿಂತು ಹೋಗಲಾರದು.
2. ನಿರ್ಣಾಯಕ ದಿನವನ್ನು 'ಸಂಭವನೀಯ ಘಟನೆ' ಎಂದು ಹೇಳಿದ ನಂತರ ಅದರ ಭಯಾನಕತೆಯ ಕಲ್ಪನೆ ಮೂಡಿಸಲಿಕ್ಕಾಗಿ ಈ ಪದ ಬಳಸಲಾಗಿದೆ.

9. ಇದೇ ಮಹಾಪರಾಧವನ್ನು ಫಿರ್‌ಔನ್ ಮತ್ತು ಅವನಿಗಿಂತ ಹಿಂದಿನವರು ಮತ್ತು ಬುಡಮೇಲಾದ ನಾಡುಗಳ ಜನರು ಎಸಗಿದ್ದರು.[3]

وَجَآءَ فِرۡعَوۡنُ وَمَنۡ قَبۡلَهٗ وَالۡمُؤۡتَفِكٰتُ
بِالۡخَاطِئَةِ ۚ ﴿٩﴾

10. ಅವರೆಲ್ಲರೂ ತಮ್ಮ ಪ್ರಭುವಿನ ಸಂದೇಶವಾಹಕರ ಆಜ್ಞೋಲ್ಲಂಘನೆ ಮಾಡಿದಾಗ ಅವನು ಅವರನ್ನು ಅತ್ಯುಗ್ರವಾಗಿ ಹಿಡಿದನು.

فَعَصَوۡا رَسُوۡلَ رَبِّهِمۡ فَاَخَذَهُمۡ اَخۡذَةً
رَّابِيَةً ﴿١٠﴾

11. ಜಲ ಪ್ರಳಯವು ಮಿತಿಮೀರಿದಾಗ[4] ನಾವು ನಿಮ್ಮನ್ನು ಹಡಗಿಗೆ ಹತ್ತಿಸಿ ಬಿಟ್ಟಿದ್ದೆವು.[5]

اِنَّا لَمَّا طَغَا الۡمَآءُ حَمَلۡنٰكُمۡ فِى الۡجَارِيَةِ ۙ ﴿١١﴾

12. ಈ ಘಟನೆಯನ್ನು ನಿಮ್ಮ ಪಾಲಿಗೆ ಒಂದು ಪಾಠದಾಯಕ ಸ್ಮರಣವಾಗಿ ಮಾಡಲು ಮತ್ತು ನೆನಪಿಡುವ ಕಿವಿಗಳು ಇದರ ನೆನಪನ್ನು ಸುರಕ್ಷಿತವಾಗಿಡುವಂತಾಗಲು (ಹೀಗೆ ಮಾಡಲಾಗಿತ್ತು).

لِنَجۡعَلَهَا لَكُمۡ تَذۡكِرَةً وَّتَعِيَهَاۤ اُذُنٌ
وَّاعِيَةٌ ﴿١٢﴾

13. ಮುಂದೆ ಒಮ್ಮೆ ಕಹಳೆಯನ್ನೂದುವಾಗ-

فَاِذَا نُفِخَ فِى الصُّوۡرِ نَفۡخَةٌ وَّاحِدَةٌ ۙ ﴿١٣﴾

14. ಹಾಗೂ ಭೂಮಿ ಮತ್ತು ಪರ್ವತಗಳನ್ನೆತ್ತಿ ಒಂದೇ ಏಟಿಗೆ ಛಿದ್ರ ವಿಚ್ಛಿದ್ರಗೊಳಿಸಲಾಗುವಾಗ,

وَّحُمِلَتِ الۡاَرۡضُ وَالۡجِبَالُ فَدُكَّتَا
دَكَّةً وَّاحِدَةً ۙ ﴿١٤﴾

15. ಆ ದಿನ, ಸಂಭವಿಸಲಿರುವ ಆ ಘಟನೆಯು ಸಂಭವಿಸಿ ಬಿಡುವುದು-

فَيَوۡمَئِذٍ وَّقَعَتِ الۡوَاقِعَةُ ۙ ﴿١٥﴾

16. ಅಂದು ಆಕಾಶವು ಬಿರಿಯುವುದು ಮತ್ತು ಅದರ ಬಿಗಿತವು ಸಡಿಲವಾಗಿ ಬಿಡುವುದು.

وَانۡشَقَّتِ السَّمَآءُ فَهِىَ يَوۡمَئِذٍ وَّاهِيَةٌ ۙ ﴿١٦﴾

17. ದೇವಚರರು ಅದರ ಸುತ್ತಮುತ್ತಲಲ್ಲಿರುವರು ಮತ್ತು ಎಂಟು ಮಂದಿ ದೇವಚರರು ಅಂದು ನಿಮ್ಮ ಪ್ರಭುವಿನ 'ವಿಶ್ವಸಿಂಹಾಸನ'ವನ್ನು ತಮ್ಮ ಮೇಲೆ ಹೊತ್ತಿರುವರು.[6]

وَّالۡمَلَكُ عَلٰۤى اَرۡجَآئِهَا ؕ وَيَحۡمِلُ
عَرۡشَ رَبِّكَ فَوۡقَهُمۡ يَوۡمَئِذٍ ثَمٰنِيَةٌ ؕ ﴿١٧﴾

---

3. ಅರ್ಥಾತ್- ಬುಡಮೇಲುಗೊಳಿಸಲಾದ ಲೂತ್ ಸಮುದಾಯದ ಪ್ರದೇಶಗಳು.
4. ಇದು ಹ. ನೂಹ್‌ರ(ಅ) ಕಾಲದ ಚಂಡಮಾರುತದ ಕಡೆಗಿರುವ ಸೂಚನೆ.
5. ವಾಸ್ತವದಲ್ಲಿ ಸಾವಿರಾರು ವರ್ಷಗಳ ಹಿಂದೆ ಗತಿಸಿದ ಜನರನ್ನು ನಾವೆಯಲ್ಲಿ ಹತ್ತಿಸಲಾಗಿತ್ತು. ಅನಂತರದ ಮಾನವ ಜನಾಂಗ ಸಂಪೂರ್ಣವಾಗಿ ಚಂಡಮಾರುತದ ವೇಳೆ ಉಳಿಸಲ್ಪಟ್ಟಿದ್ದವರ ಸಂತಾನವಾಗಿದ್ದಾರೆ. ಆದ್ದರಿಂದಲೇ ಇಲ್ಲಿ, "ನಾವು ನಿಮ್ಮನ್ನು ನಾವೆಯಲ್ಲಿ ಹತ್ತಿಸಿದ್ದೆವು" ಎಂದು ಹೇಳಲಾಗಿದೆ.
6. ಈ ಸೂಕ್ತ 'ಮುತಶಾಬಿಹಾತ್'ಗಳ ಸಾಲಿಗೆ ಸೇರಿದೆ. ಆದ್ದರಿಂದ ಇದರ ಅರ್ಥವನ್ನು ಗೊತ್ತುಪಡಿಸುವುದು ಬಹಳ ತ್ರಾಸದಾಯಕ. 'ದೇವಸಿಂಹಾಸನ'ವೆಂದರೇನೆಂದಾಗಲಿ, ನಿರ್ಣಾಯಕ ದಿನದಂದು ಎಂಟು ದೇವಚರರು ಅದನ್ನು ಎತ್ತಿ ಹಿಡಿದಿರುವ ಸ್ವರೂಪ ಹೇಗಿರುವುದೆಂದಾಗಲಿ ತಿಳಿಯಲು ನಮಗೆ ಸಾಧ್ಯವಿಲ್ಲ. ಆದರೆ ಅಲ್ಲಾಹನು ಸಿಂಹಾಸನಾರೂಢನಾಗಿರುವನು ಮತ್ತು ಎಂಟು ದೇವಚರರು ಅವನನ್ನು ಸಿಂಹಾಸನ ಸಮೇತ

18. ಅದು ನೀವು ಹಾಜರುಗೊಳಿಸಲ್ಪಡುವ ದಿನವಾಗಿರುವುದು. ನಿಮ್ಮ ಯಾವ ರಹಸ್ಯವೂ ಅಡಗಿರಲಾರದು.

يَوْمَئِذٍ تُعْرَضُونَ لَا تَخْفَىٰ مِنكُمْ خَافِيَةٌ ﴿١٨﴾

19. ಆಗ ಯಾರ ಕರ್ಮಪತ್ರವನ್ನು ಅವನ ಬಲಗೈಯಲ್ಲಿ ಕೊಡಲಾಗುವುದೋ ಅವನು ಹೇಳುವನು, "ಇದೋ ನನ್ನ ಕರ್ಮಪತ್ರವನ್ನು ಓದಿರಿ.

فَأَمَّا مَنْ أُوتِيَ كِتَابَهُ بِيَمِينِهِ فَيَقُولُ هَاؤُمُ اقْرَءُوا كِتَابِيَهْ ﴿١٩﴾

20. ನನಗೆ ನನ್ನ ಕರ್ಮಪತ್ರವು ಖಂಡಿತವಾಗಿಯೂ ಸಿಗಲಿದೆಯೆಂದು ನಾನು ಗ್ರಹಿಸಿದ್ದೆ."[7]

إِنِّي ظَنَنتُ أَنِّي مُلَاقٍ حِسَابِيَهْ ﴿٢٠﴾

21. ಹೀಗೆ ಅವನು ಮನಮೆಚ್ಚುಗೆಯ ಸುಖಭೋಗಗಳಲ್ಲಿರುವನು-

فَهُوَ فِي عِيشَةٍ رَّاضِيَةٍ ﴿٢١﴾

22. ಅತ್ಯುನ್ನತ ಸ್ವರ್ಗೋದ್ಯಾನದಲ್ಲಿ,

فِي جَنَّةٍ عَالِيَةٍ ﴿٢٢﴾

23. ಅದರ ಫಲದ ಗೊಂಚಲುಗಳು ಬಾಗಿಕೊಂಡಿರುವುವು.

قُطُوفُهَا دَانِيَةٌ ﴿٢٣﴾

24. (ಇಂತಹವರೊಡನೆ) "ನೀವು ಕಳೆದು ಹೋದ ದಿನಗಳಲ್ಲಿ ಮಾಡಿರುವ ಸತ್ಕರ್ಮಗಳ ಪ್ರತಿಫಲವಾಗಿ ಸಂತೋಷದಿಂದ ತಿನ್ನಿರಿ ಮತ್ತು ಕುಡಿಯಿರಿ(ಎಂದು ಹೇಳಲಾಗುವುದು)."

كُلُوا وَاشْرَبُوا هَنِيئًا بِمَا أَسْلَفْتُمْ فِي الْأَيَّامِ الْخَالِيَةِ ﴿٢٤﴾

25. ಯಾರ ಕರ್ಮಪತ್ರವನ್ನು ಅವನ ಎಡಗೈಯಲ್ಲಿ ಕೊಡಲಾಗುವುದೋ ಅವನು ಹೇಳುವನು, "ಅಯ್ಯೋ! ನನ್ನ ಕರ್ಮಪತ್ರವನ್ನು ನನಗೆ ಕೊಡದೆ ಇರುತ್ತಿದ್ದರೆ!

وَأَمَّا مَنْ أُوتِيَ كِتَابَهُ بِشِمَالِهِ فَيَقُولُ يَا لَيْتَنِي لَمْ أُوتَ كِتَابِيَهْ ﴿٢٥﴾

26. ಮತ್ತು ನನ್ನ ಕರ್ಮ ವೃತ್ತಾಂತವೇನೆಂದು ನನಗೆ ತಿಳಿಯದೆ ಇರುತ್ತಿದ್ದರೆ![8]

وَلَمْ أَدْرِ مَا حِسَابِيَهْ ﴿٢٦﴾

ಎತ್ತಿ ಹಿಡಿಯುವರೆಂಬ ವಿಚಾರ ಕಲ್ಪನೆಗೆ ನಿಲುಕದಂತಹುದಾಗಿದೆ. ಆ ಸಂದರ್ಭದಲ್ಲಿ ಅಲ್ಲಾಹನು ಸಿಂಹಾಸನಾರೂಢನಾಗಿರುವನೆಂದೂ ಸೂಕ್ತದಲ್ಲಿ ಹೇಳಲಾಗಿಲ್ಲ. ಅಲ್ಲದೆ ಅಲ್ಲಾಹನ ಬಗ್ಗೆ ಪವಿತ್ರ ಕುರ್‌ಆನ್ ನೀಡಿರುವ ಚಿತ್ರಣದ ಆಧಾರದಲ್ಲೂ - ದೇಹ, ಆಕಾರ ಮತ್ತು ಸ್ಥಾನಗಳಂತಹ ಮಿತಿಗಳಿಂದ ಮುಕ್ತನಾದ ದೇವನು ಎಲ್ಲಾದರೂ ಕುಳಿತಿದ್ದು, ಸೃಷ್ಟಿಗಳು ಅವನನ್ನು ಎತ್ತಿಕೊಂಡಿರುವರೆಂದು ಊಹಿಸುವಂತಿಲ್ಲ. ಆದ್ದರಿಂದ ಸಂಶೋಧನೆ ನಡೆಸಿ ಅದಕ್ಕೆ ಅರ್ಥವನ್ನು ಕಲ್ಪಿಸಲು ಪ್ರಯತ್ನಿಸುವುದು ತನ್ನನ್ನು ಪಥಭ್ರಷ್ಟತೆಯ ಅಪಾಯಕ್ಕೀಡು ಮಾಡಿದಂತೆಯೇ ಸರಿ.

7. ಅರ್ಥಾತ್- ಲೋಕದಲ್ಲಿ ಪರಲೋಕದ ಬಗ್ಗೆ ಅಲಕ್ಷ್ಯನಾಗದೆ ಒಂದು ದಿನ ಅಲ್ಲಾಹನ ಮುಂದೆ ಹಾಜರಾಗಿ ಲೆಕ್ಕ ಸಮರ್ಪಣೆ ಮಾಡಬೇಕಾಗಿದೆ ಎಂಬ ಪ್ರಜ್ಞೆಯೊಂದಿಗೆ ಜೀವನ ನಡೆಸಿದ್ದೇ ನನ್ನ ಸುದೈವಕ್ಕೆ ಕಾರಣವೆಂದು ಅವನು ಹೇಳುವನು.

8. ಸೂಕ್ತದ ಇನ್ನೊಂದು ಅರ್ಥ ಹೀಗಾಗಬಹುದು. ಲೆಕ್ಕ ಸಮರ್ಪಣೆ ಎಂದರೆ ಏನೆಂದು ನನಗೆಂದೂ ತಿಳಿದಿರಲಿಲ್ಲ. ಒಂದು ದಿನ ನನಗೂ ಲೆಕ್ಕ ಸಮರ್ಪಣೆ ಮಾಡಬೇಕಾಗಿದೆ ಮತ್ತು ನಾನು ಮಾಡಿದ್ದೆಲ್ಲವನ್ನೂ ನನ್ನ ಮುಂದಿರಿಸಲಾಗುವುದು ಎಂದು ನಾನೆಂದೂ ಊಹಿಸಿಯೂ ಇರಲಿಲ್ಲ.

27. ಅಯ್ಯೋ!(ಭೂಲೋಕದಲ್ಲಿ ಬಂದಿದ್ದ) ನನ್ನ ಈ ಮರಣವೇ ನಿರ್ಣಾಯಕವಾಗಿರುತ್ತಿದ್ದರೆ!

يٰلَيْتَهَا كَانَتِ الْقَاضِيَةَ ﴿٢٧﴾

28. ನನ್ನ ಸಂಪತ್ತು ಇಂದು ನನಗೇನೂ ಪ್ರಯೋಜನ ಕೊಡಲಿಲ್ಲ.

مَآ أَغْنٰى عَنِّيْ مَالِيَهْ ﴿٢٨﴾

29. ನನ್ನ ಅಧಿಕಾರವೆಲ್ಲವೂ ಕೊನೆಗೊಂಡಿತು."[9]

هَلَكَ عَنِّيْ سُلْطٰنِيَهْ ﴿٢٩﴾

30. (ಆಗ ಹೀಗೆ ಅಪ್ಪಣೆಯಾಗುವುದು) ಇವನನ್ನು ಹಿಡಿಯಿರಿ ಮತ್ತು ಇವನಿಗೆ ಕಂಠ ಕಡಗವನ್ನು ಹಾಕಿರಿ.

خُذُوْهُ فَغُلُّوْهُ ﴿٣٠﴾

31. ಅನಂತರ ಇವನನ್ನು ನರಕದೊಳಕ್ಕೆ ತಳ್ಳಿ ಬಿಡಿರಿ,

ثُمَّ الْجَحِيْمَ صَلُّوْهُ ﴿٣١﴾

32. ಆ ಬಳಿಕ ಅವನನ್ನು ಎಪ್ಪತ್ತು ಮೊಳ ಉದ್ದದ ಸಂಕೋಲೆಯಿಂದ ಬಿಗಿಯಿರಿ.

ثُمَّ فِيْ سِلْسِلَةٍ ذَرْعُهَا سَبْعُوْنَ ذِرَاعًا فَاسْلُكُوْهُ ﴿٣٢﴾

33. ಇವನು ಮಹಿಮಾವಂತನಾದ ಅಲ್ಲಾಹನ ಮೇಲೆ ವಿಶ್ವಾಸವಿರಿಸುತ್ತಿ ರಲಿಲ್ಲ-

إِنَّهٗ كَانَ لَا يُؤْمِنُ بِاللّٰهِ الْعَظِيْمِ ﴿٣٣﴾

34. ಮತ್ತು ದರಿದ್ರರಿಗೆ ಊಟ ಕೊಡಲು ಪ್ರೇರೇಪಿಸುತ್ತಲೂ ಇರಲಿಲ್ಲ.[10]

وَلَا يَحُضُّ عَلٰى طَعَامِ الْمِسْكِيْنِ ﴿٣٤﴾

35. ಆದುದರಿಂದ ಇಲ್ಲಿ ಅವನಿಗೆ ಅನುಕಂಪ ತೋರುವವನಾರೂ ಇಲ್ಲ-

فَلَيْسَ لَهُ الْيَوْمَ هٰهُنَا حَمِيْمٌ ﴿٣٥﴾

36. ಮತ್ತು ಗಾಯದ ಕೀವಿನ ಹೊರತು ಅವನಿಗೆ ಬೇರೆ ಯಾವ ಆಹಾರವೂ ಇಲ್ಲ-

وَلَا طَعَامٌ إِلَّا مِنْ غِسْلِيْنٍ ﴿٣٦﴾

37. ಅದನ್ನು ಪಾಪಿಗಳ ಹೊರತು ಇನ್ನಾರೂ ತಿನ್ನುವುದಿಲ್ಲ.

لَا يَأْكُلُهٗٓ إِلَّا الْخٰطِئُوْنَ ﴿٣٧﴾

38. ಹಾಗಲ್ಲ, ನಾನು ಆಣೆ ಹಾಕುತ್ತೇನೆ,[11] ನೀವು ನೋಡುವ ವಸ್ತುಗಳ-

فَلَآ أُقْسِمُ بِمَا تُبْصِرُوْنَ ﴿٣٨﴾

---

9. ಅರ್ಥಾತ್- ಯಾವ ಶಕ್ತಿಯ ಆಧಾರದಲ್ಲಿ ನಾನು ಲೋಕದಲ್ಲಿ ದರ್ಪ ತೋರುತ್ತಿದ್ದೆನೋ ಅದು ಇಲ್ಲಿ ಕೊನೆಗೊಂಡಿದೆ. ಇಲ್ಲಿ ನನಗೆ ಯಾವುದೇ ಸೈನ್ಯವಿಲ್ಲ, ಆಜ್ಞಾಪಾಲಕರಿಲ್ಲ, ನನ್ನ ರಕ್ಷಣೆಗಾಗಿ ಏನೂ ಮಾಡಲಾಗದ ದುರ್ಬಲ ಮತ್ತು ಅಸಹಾಯಕ ದಾಸನಾಗಿ ನಾನಿಲ್ಲಿ ನಿಂತಿದ್ದೇನೆ.

10. ಅರ್ಥಾತ್- ಸ್ವತಃ ಬಡಬಗ್ಗರಿಗೆ ಉಣಿಸುವುದಂತಿರಲಿ, ದೇವನ ಬಡ ದಾಸರಿಗೆ ಉಣಬಡಿಸಿರಿ ಎಂದು ಇತರರೊಂದಿಗೆ ಹೇಳುವುದನ್ನೂ ನಾನು ಇಷ್ಟಪಡುತ್ತಿರಲಿಲ್ಲ.

11. ಅರ್ಥಾತ್- ವಸ್ತುಸ್ಥಿತಿ ನೀವು ಭಾವಿಸಿಕೊಂಡಿರುವಂತಿಲ್ಲ.

39. ಹಾಗೂ ನೋಡದ ವಸ್ತುಗಳ-

وَمَا لَا تُبْصِرُوْنَ ﴿٣٩﴾

40. ಇದು ಓರ್ವ ಗೌರವಾನ್ವಿತ ಸಂದೇಶವಾಹಕನ ಮಾತಾಗಿದೆ.

إِنَّهُ لَقَوْلُ رَسُوْلٍ كَرِيْمٍ ﴿٤٠﴾

41. ಇದು ಯಾವುದೇ ಕವಿಯ ಮಾತಲ್ಲ. ನೀವು ಅತ್ಯಲ್ಪವೇ ವಿಶ್ವಾಸವಿರಿಸುತ್ತೀರಿ-

وَّمَا هُوَ بِقَوْلِ شَاعِرٍ ۚ قَلِيْلًا مَّا تُؤْمِنُوْنَ ﴿٤١﴾

42. ಮತ್ತು ಇದು ಯಾವುದೇ ಜೋತಿಷಿಯ ಮಾತೂ ಅಲ್ಲ. ನೀವು ಅತ್ಯಲ್ಪವೇ ಚಿಂತನೆ ನಡೆಸುತ್ತೀರಿ.

وَلَا بِقَوْلِ كَاهِنٍ ۚ قَلِيْلًا مَّا تَذَكَّرُوْنَ ﴿٤٢﴾

43. ಇದು ಸರ್ವಲೋಕಗಳ ಪಾಲಕ ಪ್ರಭುವಿನ ಕಡೆಯಿಂದ ಅವತೀರ್ಣವಾಗಿದೆ.

تَنْزِيْلٌ مِّنْ رَّبِّ الْعٰلَمِيْنَ ﴿٤٣﴾

44. ಮತ್ತು ಇವರು(ಪ್ರವಾದಿ) ಸ್ವಯಂ ಯಾವುದಾದರೂ ಮಾತನ್ನು ಸೃಷ್ಟಿಸಿಕೊಂಡು ನಮ್ಮದೆಂದು ಹೇಳಿರುತ್ತಿದ್ದರೆ-

وَلَوْ تَقَوَّلَ عَلَيْنَا بَعْضَ الْاَقَاوِيْلِ ﴿٤٤﴾

45. ನಾವು ಇವರ ಬಲಗೈಯನ್ನು ಹಿಡಿದು ಬಿಡುತ್ತಿದ್ದೆವು-

لَاَخَذْنَا مِنْهُ بِالْيَمِيْنِ ﴿٤٥﴾

46. ಮತ್ತು ಇವರ ಕಂಠನಾಡಿಯನ್ನು ಕತ್ತರಿಸಿ ಬಿಡುತ್ತಿದ್ದೆವು.

ثُمَّ لَقَطَعْنَا مِنْهُ الْوَتِيْنَ ﴿٤٦﴾

47. ಆಗ, ನಿಮ್ಮ ಪೈಕಿ (ನಮ್ಮನ್ನು) ಈ ಕಾರ್ಯದಿಂದ ತಡೆಯುವವರಾರೂ ಇರುತ್ತಿರಲಿಲ್ಲ.[12]

فَمَا مِنْكُمْ مِّنْ اَحَدٍ عَنْهُ حٰجِزِيْنَ ﴿٤٧﴾

48. ವಾಸ್ತವದಲ್ಲಿ ಇದು ದೇವಭಯವುಳ್ಳವರಿಗೊಂದು ಉಪದೇಶವಾಗಿದೆ-

وَاِنَّهُ لَتَذْكِرَةٌ لِّلْمُتَّقِيْنَ ﴿٤٨﴾

49. ಮತ್ತು ನಿಮ್ಮಲ್ಲಿ ಕೆಲವರು ನಿರಾಕರಿಸುವವರಿದ್ದಾರೆಂಬುದನ್ನು ನಾವು ಬಲ್ಲೆವು.

وَاِنَّا لَنَعْلَمُ اَنَّ مِنْكُمْ مُّكَذِّبِيْنَ ﴿٤٩﴾

---

12. ಪ್ರವಾದಿಗೆ ತನ್ನ ವತಿಯಿಂದ ದೇವವಾಣಿಯಲ್ಲಿ ಯಾವುದೇ ರೀತಿಯ ಏರುಪೇರು ಮಾಡುವ ಅಧಿಕಾರವಿಲ್ಲ ಮತ್ತು ಅವರು ಹಾಗೆ ಮಾಡಿದರೆ ನಾವು ಉಗ್ರ ದಂಡನೆಯನ್ನು ನೀಡುತ್ತೇವೆ ಎಂದು ತಿಳಿಸುವುದು ಇದರ ನೈಜ ಉದ್ದೇಶ. ಒಬ್ಬ ರಾಜನು ನೇಮಿಸಿರುವಂತಹ ಅಧಿಕಾರಿ ಅವನ ಹೆಸರಲ್ಲಿ ಯಾವುದೇ ಖೋಟಾ ಕೆಲಸವನ್ನು ಮಾಡಿದರೆ ರಾಜನು ಅವನ ಕೈ ಹಿಡಿದು ಶಿರಚ್ಛೇದನ ಮಾಡಿಬಿಡುವ ಚಿತ್ರಣ ಮುಂದೆ ಬರುವಂತಹ ಧಾಟಿಯಲ್ಲಿ ಈ ವಿಷಯವನ್ನು ವರ್ಣಿಸಲಾಗಿದೆ. ಕೆಲವರು ಇದರಿಂದ ತಪ್ಪು ಅರ್ಥವನ್ನು ಕಲ್ಪಿಸುತ್ತಾರೆ. ಅವರ ಪ್ರಕಾರ ಯಾರಾದರೂ ಪ್ರವಾದಿತ್ವದ ಬಗ್ಗೆ ವಾದಿಸಿದರೆ, ಅಲ್ಲಾಹನ ವತಿಯಿಂದ ಅವನ ಹೃದಯನಾಡಿ ಅಥವಾ ಕಂಠನಾಡಿ ಕತ್ತರಿಸಲ್ಪಡದಿದ್ದರೆ ಅದು ಅವನು ಪ್ರವಾದಿ ಎಂಬುದಕ್ಕೆ ಆಧಾರವಾಗಿದೆ. ವಾಸ್ತವವಾಗಿ ಈ ಸೂಕ್ತವು ನೈಜ ಪ್ರವಾದಿಗಳ ಬಗ್ಗೆ ಅವತೀರ್ಣಗೊಂಡಿದೆ. ಪ್ರವಾದಿತ್ವದ ಬಗ್ಗೆ ಮಿಥ್ಯವಾದ ಮಾಡುವವರ ಕುರಿತಲ್ಲ. ಮಿಥ್ಯ ಪ್ರವಾದಿಗಳು ಪ್ರವಾದಿತ್ವದ ಬಗ್ಗೆ ಮಾತ್ರವಲ್ಲ ದೇವತ್ವದ ಬಗ್ಗೆಯೂ ವಾದಿಸುತ್ತಾರೆ. ಮಾತ್ರವಲ್ಲ ವರ್ಷಗಟ್ಟಲೆ ಅವರು ಭೂಮಿಯಲ್ಲಿ ರಾಜಾರೋಷದಿಂದ ತಿರುಗುತ್ತಿರುತ್ತಾರೆ. ಇದು ಅವರ ಸತ್ಯತೆಗೆ ಇರುವ ಆಧಾರಗಳಲ್ಲ.

50. ಇಂತಹ ಸತ್ಯನಿಷೇಧಿಗಳಿಗೆ ಖಂಡಿತವಾಗಿಯೂ ಇದು ಖೇದದ ಹೇತುವಾಗಿದೆ.

وَإِنَّهُۥ لَحَسْرَةٌ عَلَى ٱلْكَٰفِرِينَ ٥٠

51. ಇದು ಅತ್ಯಂತ ಖಚಿತವಾದ ಸತ್ಯವಾಗಿದೆ.

وَإِنَّهُۥ لَحَقُّ ٱلْيَقِينِ ٥١

52. ಆದುದರಿಂದ ಸಂದೇಶವಾಹಕರೇ, ನಿಮ್ಮ ಮಹಿಮಾಪೂರ್ಣ ಪ್ರಭುವಿನ ನಾಮವನ್ನು ಜಪಿಸಿರಿ.

فَسَبِّحْ بِٱسْمِ رَبِّكَ ٱلْعَظِيمِ ٥٢